ದಿಃ27.09.2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀಮತಿ. ಪಿ.ಎಸ್.ಹೆಚ್., ವಕೀಲರಿಂದ 2 ನೇ ಆರೋಪಿಯ ಪರವಾಗಿಃ

ನಾನು ಹುಟ್ಟಿನಿಂದ ಗಿಡದಕೋಣೇನಹಳ್ಳಿಯಲ್ಲಿ ವಾಸವಿದ್ದೇನೆ. ನನಗೆ ಇಬ್ಬರು ಹೆಂಡತಿಯರು, ಅವರೆಂದರೆ ಗೌರಮ್ಮ ಮತ್ತು ಗಾಯತ್ರಿ ಎಂದರೆ ಸರಿ. ನಮಗೆ 3 ಜನ ಗಂಡು ಮಕ್ಕಳು ಮೊದಲನೇ ಹೆಂಡತಿಯಿಂದ ಎಂದರೆ ಸರಿ.

2. ನನಗೆ ನನ್ನ ತಾಯಿ ಹೆಸರಲ್ಲಿ 4 ಎಕರೆ ಆಸ್ತಿ ಗಿಡದಕೋಣೇನಹಳ್ಳಿಯಲ್ಲಿ ಇದೆ ಎನ್ನುವುದು ಸರಿ. ಅದು ಸುಮಾರು 20-25 ಕೋಟಿ ಬೆಲೆ ಬಾಳಬಹುದು. 2 ನೇ ಆರೋಪಿ ಮತ್ತು ಆಕೆಯ ಗಂಡ ಗಂಗಣ್ಣ ನನಗೆ ಹಲವು ವರ್ಷಗಳಿಂದ ಚಿರಪರಿಚಿತ ಮತ್ತು ಗಂಗಣ್ಣ ನನ್ನ ಆಪ್ತ ಸ್ನೇಹಿತ ಎಂದರೆ ಸರಿ. ನಾನು ಕಾರು ಖರೀದಿಸುವಾಗ 2 ನೇ ಆರೋಪಿ ಸಾಲಕ್ಕೆ ಜಾಮೀನು ನೀಡಿದ್ದರು ಎಂದರೆ ಸರಿ.

3. ಘಟನೆಯ ಸಮಯದಲ್ಲಿ ನಾನು ನನ್ನ 2 ನೇ ಹೆಂಡತಿ ಗಾಯತ್ರಿರವರ ತಾಯಿಗೆ ದೂರವಾಣಿ ಕರೆಯನ್ನು ಯಾವ ಸಂಖ್ಯೆಯ ಮೊಬೈಲಿನಿಂದ ಮಾಡಿದೆ ಎಂದು ಗೊತ್ತು, ಆದರೆ ಅವರ ಮೊಬೈಲು ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ನನ್ನನ್ನು ಆರೋಪಿತರು ದ್ವಿಚಕ್ರ

ವಾಹನದಲ್ಲಿ ಅಪಹರಿಸುವಾಗ ಸಾರ್ವಜನಿಕರಿಂದ ಸಹಾಯ ಕೇಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನನಗೆ ಪೊಲೀಸರೇ ಸಹಾಯ ಮಾಡದಿದ್ದ ಕಾರಣ ನಾನು ಕೂಗಾಡಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ದ್ವಿಚಕ್ರ ವಾಹನದಿಂದ ನನ್ನನ್ನು ಕಾರಿನಲಿ ಕೂರಿಸಿಕೊಂಡು ನನ್ನನ್ನು ಆರೋಪಿಗಳು ಕರೆದುಕೊಂಡು ಹೋಗುವಾಗ ಅದು ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಸಾರ್ವಜನಿಕರ ಸಹಾಯ ಪಡೆಯಬಹುದಿತ್ತು ಎಂದರೆ ಆರೋಪಿಗಳು ನನಗೆ ಅವಕಾಶ ನೀಡಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ನನ್ನನ್ನು ಕಾರಿನಲ್ಲಿ ಕರೆದುಕೊಂಡು ಹೋದ ರಸ್ತೆ ಎರಡೂ ಬದಿಯಲ್ಲಿ ವಾಸದ ಮನೆಗಳು ಮತ್ತು ಸಾರ್ವಜನಿಕರು ಇದ್ದರು ಎನ್ನುವುದು ಸರಿ. ತಿಪ್ಪಗೊಂಡನಹಳ್ಳಿ ಊರಿನ ನಂತರ ಮತ್ತೊಂದು ಊರಿಗೆ ಮುನ್ನ ಚೋಳನಾಯಕನಹಳ್ಳಿ ನಂತರ ರಸ್ತೆ ಬದಿಯಲ್ಲಿ ಆರೋಪಿತರು ಕಾರನ್ನು ನಿಲ್ಲಿಸಿದರು. ನನ್ನನ್ನು ನನ್ನ ಹಣಕಾಸಿನ ಹಿನ್ನೆಲೆ ಮತ್ತು ಆಸ್ತಿಪಾಸ್ತಿಗಳ ಬಗ್ಗೆ ತಿಳಿದವರೇ ಅಪಹರಣ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ, ಇದ್ದರೂ ಇರಬಹುದು. ನನ್ನನ್ನು ಅಪಹರಣ ಮಾಡಿದ ಕಾರಿನಲ್ಲಿ 4 ಜನ ಇದ್ದರು. ಎಲ್ಲಾರೂ ನನ್ನಿಂದ ರೂ 25 ಲಕ್ಷ ಹಣ ಬೇಡಿಕೆ ಇಟ್ಟರು. ಆರೋಪಿತರು ಕೊನೇಯದಾಗಿ ನನಗೆ ನಿದ್ರೆ ಮಾತ್ರೆ ನೀಡಿದರು ಎನ್ನುವುದು ಸರಿ.

4. ತಿಪ್ಪಗೊಂಡನಹಳ್ಳಿಯಿಂದ ಅಂಜನಾನಗರ ಸುಮಾರು 15-

20 ಕಿಮೀ ಅಂತರವಿದೆ. ಸದರಿ ಅಂತರವನ್ನು ಕ್ರಮಿಸಲು ಸುಮಾರು 30-40 ನಿಮಿಷ ತಗುಲುತ್ತದೆ ಎನ್ನುವುದು ಸರಿ. ನಾನು ನಿದ್ರೆ ಮಾತ್ರೆ ನೀಡಿದ್ದ ಕಾರಣ ಅಂಜನಾನಗರಕ್ಕೆ ಬರುವ ಸಮಯಕ್ಕೆ ಪ್ರಜ್ಞಾಹೀನನಾಗಿದ್ದೆ ಎನ್ನುವುದು ಸರಿಯಲ್ಲ. ನಾನು ನಿದ್ರಾವಸ್ಥೆಯಲ್ಲಿದ್ದ ಕಾರಣ ಯಾರಿಗೂ ದೂರವಾಣಿ ಕರೆ ಮಾಡಿಲ್ಲ ಮತ್ತು ಯಾರೊಂದಿಗೂ ಮಾತಾಡಿಲ್ಲ ಎನ್ನುವುದು ಸರಿಯಲ್ಲ.

5. ನಾನು ಹೇಳಿದಂತೆಯೇ ಪೊಲೀಸರು ಈ ಪ್ರಕರಣದಲ್ಲಿ ನನ್ನ ಹೇಳಿಕೆಯನ್ನು ದಾಖಲಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಪೊಲೀಸರೇ ನನ್ನಿಂದ 4 ಖಾಲಿ ಹಾಳೆಗಳಿಗೆ ಸಹಿ ಪಡೆದಿರುತ್ತಾರೆ. ಈ ಪ್ರಕರಣದಲ್ಲಿ ನನ್ನನ್ನು ಯಾರು ಅಪಹರಣ ಮಾಡಿರುತ್ತಾರೆಂದು ನಿ1ದಿಷ್ಟವಾಗಿ ತಿಳಿದಿಲ್ಲ ಎನ್ನುವುದು ಸರಿ. ನ್ಯಾಯಾಲಯದ ಮುಂದಿರುವ ಆರೋಪಿಗಳು ಯಾರು ಅಪಹರಣದಲ್ಲಿ ಭಾಗಿಯಾಗಿರುತ್ತಾರೆಂದು ನನಗೆ ವೈಯ್ಯಕ್ತಿಕವಾಗಿ ಮಾಹಿತಿ ಇಲ್ಲ ಎನ್ನುವುದು ಸರಿ. ಆ ಕಾರಣಕ್ಕಾಗಿ ನ್ಯಾಯಾಲಯದ ಮುಂದಿರುವ ಆರೋಪಿಗಳು ಯಾವುದೇ ಅಪರಾಧವನ್ನು ನನ್ನ ವಿರುದ್ದ ಎಸಗಿಲ್ಲ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಕೆ.ಟಿ.ವಿ., ವಕೀಲರಿಂದ 1, 3ರಿಂದ 5ನೇ ಆರೋಪಿಗಳ ಪರವಾಗಿಃ</u>

4ನೇ ಆರೋಪಿ ನನ್ನ ಪತ್ನಿ ಎನ್ನುವುದು ಸರಿ. 1ನೇ ಆರೋಪಿ ನನ್ನ ಬಾಮೈದ. ಘಟನೆ ದಿನ ನಾನು ನಡೆದುಕೊಂಡು ಹೋಗುವಾಗ ರಾತ್ರಿಯಾಗಿತ್ತು ಎನ್ನುವುದು ಸರಿ. ಆ ಸಮಯದಲ್ಲಿ ನನ್ನನ್ನು ಯಾರು ಅಪಹರಣ ಮಾಡಿದರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎನ್ನುವುದು ಸರಿ. ಈ ಪ್ರಕರಣದಲ್ಲಿ 1 ಮತ್ತು 4ನೇ ಆರೋಪಿತರ ವಿರುದ್ದ ನಾನು ದೂರು ನೀಡಿದ ನಂತರ ಮಾತ್ರ ಅವರೊಂದಿಗೆ ವಾಸವಿದ್ದು, ಅದರ ಮುನ್ನ ದಿನಗಳಲ್ಲಿ ವಾಸವಿರಲಿಲ್ಲ ಎನ್ನುವುದು ಸರಿಯಲ್ಲ. ಈ ಪ್ರಕರಣ ದಾಖಲಿಸಿದ ನಂತರ 1 ವರ್ಷದ ಹಿಂದಿನಿಂದ ಮಾತ್ರ ನಾನು 1 ಮತ್ತು 4ನೇ ಆರೋಪಿತರೊಂದಿಗೆ ವಿಶ್ವಾಸದಿಂದ ಇರುತ್ತೇನೆ ಎನ್ನುವುದು ಸರಿಯಲ್ಲ. ನಾನು ಆರೋಪಿತರ ವಿರುದ್ದ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಉಳಿದ ವಿಷಯಗಳಿಗೆ ಸಂಬಂದಪಟ್ಟಂತೆ 2ನೇ ಆರೋಪಿತ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಲಾಯಿತು)

<u>ಪಾಟೀ ಸವಾಲುಃ ಶ್ರೀ. ಕೆ.ಸಿ.ಎಂ., ವಕೀಲರಿಂದ 11ನೇ ಆರೋಪಿ ಪರವಾಗಿಃ</u>

ನ್ಯಾಯಾಲಯದ ಮುಂದಿರುವ 11 ನೇ ಆರೋಪಿ ನವೀನ್ ನನಗೆ ಪರಿಚಯವಿಲ್ಲ, ಆತನನ್ನು ಈ ಹಿಂದೆ ಎಲ್ಲೂ ನೋಡಿಲ್ಲ. 11 ನೇ ಆರೋಪಿತನನ್ನು ಗುರುತಿಸಲು ಬರುವುದಿಲ್ಲ. ನಾನು 11 ನೇ ಆರೋಪಿತನ ವಿರುದ್ದ ಯಾವುದೇ ದೂರು ಮತ್ತು ಹೇಳಿಕೆ ನೀಡಿಲ್ಲ. 11 ನೇ ಆರೋಪಿಯಿಂದ ನನಗೆ ವೈಯ್ಯಕ್ತಿಕವಾಗಿ ತಿಳಿದಂತೆ ಯಾವುದೇ ತೊಂದರೆ ಆಗಿಲ್ಲ ಎನ್ನುವುದು ಸರಿ. ಈ ಪ್ರಕರಣಕ್ಕೂ 11 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿ.

(ಉಳಿದ ವಿಷಯಗಳಿಗೆ ಸಂಬಂದಪಟ್ಟಂತೆ 2 ನೇ ಆರೋಪಿತ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಲಾಯಿತು)

ಪಾಟೀ ಸವಾಲುಃ ಶ್ರೀ. ಟಿ.ಜಿ., ವಿ.ಎಸ್.ಪಿ., ಮತ್ತು ಎಂ.ಪಿ.ಎನ್., ವಕೀಲರಿಂದ 6 ರಿಂದ 10 ನೇ ಆರೋಪಿಗಳ ಪರವಾಗಿಃ ಗೈರು ಹಾಜರು, ಆರೋಪಿತರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ವೆಚ್ಚ ಸಹಿತ ಕಾಲಾವಕಾಶ ನೀಡಲಾಯಿತು.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.